ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿ ಆಗಸ್ಟ್ ೩೧ ರಂದು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಈಗ, ಫೈನಲ್ ಲಿಸ್ಟ್ ಯಾವಾಗ ಮಾಡುತ್ತೀರಿ ಈ ಪ್ರಾವಿಷನಲ್ ಲಿಸ್ಟ್‌ನಲ್ಲಿ ಬಹಳಷ್ಟು ಜನರಿಗೆ ತೊಂದರೆಯಾಗಿದೆ, ಆದ್ದರಿಂದ ಫೈನಲ್ ಲಿಸ್ಟ್ ಯಾವಾಗ ಮಾಡುತ್ತೀರೆಂದು ನಾನು ಕೇಳುತ್ತೇನೆ. ಆಮೇಲೆ, ಪ್ರಮೋಷನ್‌ನ್ನು ಪ್ರಾವಿಷನಲ್ ಲಿಸ್ಟ್ ಪ್ರಕಾರ ಮಾಡಿದ್ದೀರಿ, ಈ ಪ್ರಾವಿಷನಲ್ ಲಿಸ್ಟ್ ಪ್ರಕಾರ ಕೆಲವರಿಗೆ ತೊಂದರೆಯಾಗಿದೆ. ಅಂದರೆ ಇದರಿಂದ ಸೀನಿಯರ್, ಜೂನಿಯರ್ ಆಗಿದ್ದಾರೆ, ಜೂನಿಯರ್ ಸೀನಿಯರ್ ಆಗಿದ್ದಾರೆ. ಇದರಿಂದ ಬಹಳಷ್ಟು ವೈದರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅದನ್ನು ಸರಿಪಡಿಸಬೇಕೆಂದು ನಾನು ಕೇಳುತ್ತೇನೆ. ಮೂರನೆಯದ್ದು ಈ ಪ್ರಮೋಷನ್ ಗಲಾಟೆಯಲ್ಲಿ ಬಹಳಷ್ಟು ಜನ ನಿವೃತ್ತರಾಗಿದ್ದಾರೆ. ರಿಟೈರ್ಡ್ ಆದವರಿಗೆ ಪ್ರಮೋಷನ್ ಇಲ್ಲ. ಪ್ರಮೋಷನ್ ಆದ ಡೇಟ್‌ನಿಂದ ಸಂಬಳದ ಬೆನಿಫಿಟ್ ಇಲ್ಲ ಆದನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ, ಈ ಬಗ್ಗೆ ಯಾವಾಗ ರಿಟೈರ್ಡ್ ಆದವರಿಗೆ ಮಾಡಿಕೊಡುತ್ತೀರಿ ? ಅವರಿಗೆ ಯಾವ ರೀತಿಯಲ್ಲಿ ಅವರ ಸ್ಯಾಲರಿ ಸೆಟ್ಲ್‌ಮೆಂಟ್ ಮಾಡುತ್ತೀರಿ? ಅಮತ್ತು ಪರಿಗೆ ಪೆನ್‌ಷನ್ ಯಾವ ಸಂಬಳದ ರೀತಿಯಲ್ಲಿ ಕೊಡುತ್ತೀರೆಂದು ನಾನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಒಂದು ಪ್ರಾವಿಷನಲ್ ಸೀನಿಯಾರಿಟಿ ಲಿಸ್ಟ್ ಅನ್ನು ಪ್ರೊಫೆಸರ್ಸ್‌ಗೆ ಸಂಬಂಧ ಪಟ್ಟಂತೆ ೫೧-೮-೮೭ ರಲ್ಲಿ ತಯಾರು ಮಾಡಲಾಯಿತು. ಇದರ ಪ್ರಕಾರ ಪ್ರಮೋಷನ್ ಕೊಟ್ಟುಕೊಂಡು ಬಂದಿವ್ವೇವೆ. ಇವರಿಂದ ಅಬ್ಜಕ್ಷನ್ ಬಂದಿವೆ. ಮತ್ತೆ ಫೈನಲ್ ಲಿಸ್ಟ್ ಆದ ಮೇಲೆ ಆದಕ್ಕೆ ತಕ್ಕಂತೆ, ರಿಟೈರ್ಡ್ ಆದವರಿಗೆ ಮತ್ತು ಯಾರು ಯಾರಿಗೆಕೊಡ ಬೇಕೋ ಅವರಿಗೆ ಕೊಡಬೇಕಾದ ಎಲ್ಲಾ ಕಾಣಕಾಸಿಸ ಸೌಕರ್ಯ ಮತ್ತು ಇತರೇ ಎಲ್ಲಾ ತರಹದ ಸೌಕರ್ಯವನ್ನು ಅವರಿಗೆ ಕೊಡಲಾಗುತ್ತದೆ.

ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳ ಬಗ್ಗೆ

೨೨೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

(ಆ) ಹೊನ್ನಾವರ ತಾಲ್ಲೂಕಿನಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಎಲ್ಲೆಲ್ಲಿ ಖಾಲಿ ಇದೆ ?

(ಇ) ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೪೭೦

ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಹೊನ್ನಾವರ ತಾಲ್ಲೂಕಿನ ಬಳಕೂರ ಮತ್ತು ಹೊನ್ನಾವರದಲ್ಲಿ ಒಂದೊಂದು ವೈದ್ಯಾಧಿಕಾರಿ ಹುದ್ದೆ ಖಾಲಿ ಇವೆ.

ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಜಿಲ್ಲಾವಾರು ಮಾಹಿತಿ

೧)	ಬೆಳಗಾವಿ ಜಿಲ್ಲೆ	೨೨
೨)	ಉತ್ತರ ಕನ್ನಡ ಜಿಲ್ಲೆ	೩೯
೩)	ಧಾರವಾಡ ಜಿಲ್ಲೆ	೧೭
೪)	ವಿಜಾಪುರ ಜಿಲ್ಲೆ	೧೬
೫)	ಗುಲ್ಬರ್ಗಾ ಜಿಲ್ಲೆ	೪೦
೬)	ಬೀದರ್ ಜಿಲ್ಲೆ	೨೩
೭)	ರಾಯಚೂರು ಜಿಲ್ಲೆ	೧೮
೮)	ಬಳ್ಳಾರಿ ಜಿಲ್ಲೆ	೩೭
೯)	ಬೆಂಗಳೂರು ನಗರ	೧
೧೦)	ಬೆಂಗಳೂರು ಗ್ರಾಮಾಂತರ	೩
೧೧)	ಕೋಲಾರ ಜಿಲ್ಲೆ	೧೧
೧೨)	ತುಮಕೂರು ಜಿಲ್ಲೆ	೧೩
೧೩)	ಚಿತ್ರದುರ್ಗ ಜಿಲ್ಲೆ	೨೪
೧೪)	ಶಿವಮೊಗ್ಗ ಜಿಲ್ಲೆ	೨೩
೧೫)	ಚಿಕ್ಕಮಗಳೂರು ಜಿಲ್ಲೆ	೪೪
೧೬)	ದಕ್ಷಿಣ ಕನ್ನಡ ಜಿಲ್ಲೆ	೪೭
೧೭)	ಹಾಸನ ಜಿಲ್ಲೆ	೨೮
೧೮)	ಮಡಿಕೇರಿ ಜಿಲ್ಲೆ	೨೪
೧೯)	ಮಂಡ್ಯ ಜಿಲ್ಲೆ	೧೩
೨೦)	ಮೈಸೂರು	೧೭

ಶ್ರೀ ಆರ್. ಎಸ್. ನಾಯಕ್.—ಮಾನ್ಯ ಅಧ್ಯಕ್ಷರೇ, ಎಲ್ಲೆಲ್ಲಿ ವೈದ್ಯರುಗಳ ಸಂಖ್ಯೆ ಖಾಲಿ ಇದೆಯೆಂದು ಕೊಟ್ಟ ಎರಡನೇ ಪುಟದಲ್ಲಿ ಉತ್ತರದಲ್ಲಿ ಉತ್ತರ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಗುಲ್ಬರ್ಗಾ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ೧೦ ಕ್ಕಿಂತ ಹೆಚ್ಚು ವೈದ್ಯರುಗಳ ಹುದ್ದೆಗಳು ಖಾಲಿ ಇವೆ. ಆದೇ ಬೆಂಗಳೂರಿನಲ್ಲಿ ಒಂದು ಹುದ್ದೆ ಖಾಲಿ ಇದೆಯೆಂದು ತೋರಿಸುತ್ತದೆ. ಬೆಂಗಳೂರು ಗ್ರಾಮಾಂತರದಲ್ಲಿ ೩, ಬೆಂಗಳೂರು ನಗರ ಮತ್ತು ಮತ್ತು ೧೧–೧೩–೧೦ ಹುದ್ದೆಗಳು ಖಾಲಿ ಇವೆಯೆಂದು ತೋರಿಸಿದ್ದಾರೆ. ಮಲೆನಾಡು ಭಾಗಕ್ಕೆ ಮತ್ತು ಹೈದರಾಬಾದ್ ಕರ್ನಾಟಕ ಭಾಗಕ್ಕೆ ವೈದ್ಯರುಗಳು ಹೋಗುವುದಕ್ಕೆ ನಿರಾಕರಿಸುತ್ತಾರೆ ಎನ್ನುವ ಪತ್ರ ಇದರಿಂದ ತಿಳಿದು ಬರುತ್ತದೆ. ಆಮೇಲೆ, ಉತ್ತರದಲ್ಲಿ ೪೬೦ ಜನ ವೈದ್ಯರುಗಳನ್ನು ಹೊಸದಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಹೊಸದಾಗಿ ಆಯ್ಕೆಯಾದವರು ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಕನಿಷ್ಟ ಪಕ್ಷ ೧೦ವರ್ಷ ಸರ್ವೀಸ್ ಮಾಡಿದ ಮೇಲೆ ಬೆಂಗಳೂರಿಗೆ ಬರುವಂಥ ರೂಲ್ಸ್ ಮಾಡಿತ್ತೀರೋ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಮತಿ ಕೆ. ಎಸ್, ನಾಗರತ್ನಮ್ಮ :—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರು ಮತ್ತು ಮಾತ್ತಿತರರು ನನ್ನ ಬಗ್ಗೆ ಏನಾ ತಿಳಿದುಕೊಳ್ಳುವುದಿಲ್ಲವೆಂದರೆ ಒಂದು ವಿಚಾರ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿರುವ ವೈದ್ಯರನ್ನು ಹಳ್ಳಿ ಕಡೆಗೆ ಟ್ರಾನ್ಸ್‌ಫರ್ ಮಾಡಿದರೆ ಆ ಹುದ್ದೆಗಳು ಖಾಲಿ ಬೀಳುವುದು ಸಹಜ. ಆಗ ಇವರುಗಳೇ ಬಂದು ಬೆಂಗಳೂರಿನಲ್ಲಿ ಆಲ್ಲಿ ಖಾಲಿ ಇದೆ, ಇಲ್ಲಿ ಖಾಲಿ ಇದೆ ಅವರನ್ನು ಇಲ್ಲಿಗೇ ಹಾಕಿಕೊಡಿ ಎಂದು ಕೇಳಿದರೆ, ನಾನು ನಿಸ್ಸಹಾಯಕಳಾಗುತ್ತೇನೆ ಇವರುಗಳು ಬಂದು ಟ್ರಾನ್ಸ್‌ಫರ್ ಮಾಡಿಕೊಂಡಲ್ಲಿಬೇಕೆಂದು ಬೇಳಿದರೆ, ಅವರುಗಳನ್ನು ಮತ್ತೆ ಬೆಂಗಳೂರಿಗೆ ವಾಪಸ್ ತರಬೇಕಾಗುತ್ತದೆ ಅದ್ದರಿಂದ, ಕೈಬಾಗಿದು ಕೆಳಿಕೊಳ್ಳುತ್ತೇನೆ. ಇವರೆಲ್ಲರನ್ನು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಕೊಡಬೇಕೆಂದು ಯಾರಾ ಕೇಳಿದೇ ಹೋದರೆ, ಈಗಿರುವ ಅನೇಕ ತರಹದ ಸಮಸ್ಯೆಗಳನು ಸರಿಪಡಿಸುತ್ತೇನೆಂದು ತಮಗೆ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್ ಎನ್. ನಾಯಕ್:—ನಾನು ಕೇಳಿದ ಪ್ರಶ್ನೆಗೆ ಸಂಬಂಧಪಟ್ಟ ಉತ್ತರ ಬಂದಿಲ್ಲ ಕನಿಷ್ಟಪಕ್ಷ ೧೦ ವರ್ಷ ಸರ್ವೀಸನ್ನು ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದವರು ಮಾಡಿದರೆ ಮಾತ್ರ ಬೆಂಗಳೂರು ಕಡೆಗೆ ಟ್ರಾನ್ಸ್‌ಫರ್ ಮಾಡಲಾಗುತ್ತದೆಂದು ರೂಲ್ಸ್ ಮಾಡಿಬಿಟ್ಟರೆ ಶಾಸಕರುಗಳು ಚೀಟಿ ಹಿಡಿದುಕೊಂಡು ಬಂದು ಮಿನಿಸ್ಟರ್ ಮನೆ ಬಾಗಿಲಿಗೆ

ತಿರುಗಾಡುವುದು ತಪ್ಪುತ್ತದೆ, ಆದ್ದರಿಂದ ರೂಲ್ ಮಾಡುತ್ತಿರೋ ಹೇಗೆ? ಇನ್ನೂ ಒಂದು ವಿಷಯ ಎಂದರೆ,

ನೀವುಗಳು ವರ್ಗಾವಣೆ ಬಗ್ಗೆ ಚೀಟಿ ತರಬೇಡಿ ಎಂದು ಹೇಳಿದ್ದೀರಿ. ನಾವುಗಳು ಆಂದರೆ ದಯವಾಡಿ ಆದರಲ್ಲಿ ನನ್ನನ್ನು ಸೇರಿಸಬೇಡಿ ಏಕೆಂದರೆ ನಾನು ಅಮ್ಮಾವ್ರು ಇದ್ದಾಗ ನಾನು ಒಂದು ಅರ್ಜಿಯನ್ನು ಕೊಟ್ಟಿದ್ದೇನೆ. ನನ್ನ ಶಾಸನಸಭಾ ಕ್ಷೇತ್ರದಿಂದ ಯಾವುದೇ ವೈದ್ಯರನ್ನು ಇಲ್ಲಿಂದ ವರ್ಗಾಯಿಸ ಬೇಡಿ ಎಂದು ಆದರಲ್ಲಿ ಹೇಳಿದ್ದೇನೆ. ಅಂತಯೇ ಒಂದಿಬ್ಬರನ್ನು ಹೊರಗಿನಿಂದ ತಂದು ಹಾಕಿ ಎಂದು ಕೂಡ ಹೇಳಿದ್ದೇನೆ, ಈಗ ನಮ್ಮಲ್ಲಿಗೆ ಹೊರಗಿನಿಂದ ಒಬ್ಬರೂ ಕೂಡ ಬಂದಿಲ್ಲ. ಆದರೆ ಅಲ್ಲಿಂದ ಬೇರೆ ಕಡೆಗೆ ಕೆಲವರು ಹೋಗಿದ್ದಾರೆ. ಇದು ನಮ್ಮ ಉತ್ತರ ಕನ್ನಡ ಜಿಲ್ಲೆಯ ಸಮಸ್ಯೆ, ಹೀಗಿರುವಾಗ ಮಾನ್ಯ ಸಚಿವರು ಚೀಟಿ ತರುವ ಸದಸ್ಯರ ಹೆಸರುಗಳ ಪಟ್ಟಿಯಲ್ಲಿ ನನ್ನನ್ನು ಸೇರಿಸುವುದು ಬೇಡ ಎಂದು ನನ್ನ ವಿನಂತಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ರಿಕ್ರೂಟ್‌ಮೆಂಟ್ ಮಾಡುವಾಗಲೇ ಅವರಿಂದ ನಾವು ಬರೆಸಿಕೊಳ್ಳುತ್ತೇವೆ. ಆ ಪ್ರಕಾರವಾಗಿ ಅವರು ಐದು ವರ್ಷಗಳ ಕಾಲ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸಬೇಕೆಂದು, ಆದರೆ ಅದು ಕಾಗದದಲ್ಲಿ ಇರುತ್ತದೆಯೇ ಹೊರತು ಯಾರೂ ಹಳ್ಳಿಗಳ ಕಡೆಗೆ ಹೋಗುವುದಿಲ್ಲ. ಎಲ್ಲರಿಗೂ ಬೆಂಗಳೂರು, ಮೈಸೂರು, ಅಥವಾ ಹುಬ್ಬಳ್ಳಿ ಬೇಕೇ ಹೊರತು ಬಳ್ಳಾರಿಗೆ ಕೂಡ ಹೋಗುವುದಿಲ್ಲ. ಹೀಗಾಗಿ ಒಂದು ತೊಂದರೆ ಬಂದಿದೆ. ನಾವು ಬರೆಸಿಕೊಳ್ಳುವುದು, ರೂಲ್ಸ್ ಮಾಡುವುದು ಇತ್ಯಾದಿ ನಡೆಯುತ್ತಾ ಬಂದಿದೆ. ಆದರೆ ಆದೆಲ್ಲಾ ನಡೆಯುವುದಿಲ್ಲ. ಆ ದೃಷ್ಟಿಯಿಂದ ದಯವಾಡಿ ಮಾನ್ಯ ಸದಸ್ಯರುಗಳು ಸಹಕಾರವನ್ನು ಈ ಕುರಿತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯ್ಕ.—ಸರಕಾರ ಇರುವುದೇ ರೂಲ್ಸ್ ಪ್ರಕಾರ ಆಡಳಿತ ನಡೆಸುವುದಕ್ಕೆ ನಿಮಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ನಾವೆಲ್ಲರೂ ಸೇರಿ ಕೊಟ್ಟಂಥ ಅಧಿಕಾರವನ್ನು ಇಂಪ್ಲಿಮೆಂಟ್ ಮಾಡುವ ಜವಾಬ್ದಾರಿಯಂ ತಮ್ಮ ಮೇಲಿದೆ. ಆ ಬಗ್ಗೆ ನಮ್ಮ ಸಹಕಾರವನ್ನು ಕೊಟ್ಟಿದ್ದೇವೆ. ಯಾವ ಅಧಿಕಾರಿ ನಿಯಮಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೋ, ಅಂಥ ವರನ್ನು ನೀವು ಬಿಲಿ ಹಾಕಿ. ಏಕೆ ಆಗುವುದಿಲ್ಲ ?

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳವರು ಬಹಳ ಗುರುತರವಾದಂಥ ಒಂದು ಆಪಾದನೆಯನ್ನು ಇಲ್ಲಿ ಮಾಡಿದ್ದಾರೆ. ಅದು ಆಡಳಿತದಲ್ಲಿ ಶಾಸಕರ ಹಸ್ತಕ್ಷೇಪದ ಕುರಿತು ಹೇಳಿದ್ದಾರೆ. ಆಡಳಿತವನ್ನು ಮಂತ್ರಿಗಳಿಂದಲೀ, ಇಲಾಖಾಧಿಕಾರಿಗಳಿಂದಲೀ ನಿರ್ವಹಿಸ ತಕ್ಕಂಥ ಕಾಲದಲ್ಲಿ...

MR. SPEAKER.—Order, order please. What is that going on ? Some members are walking. This is very unfair. The whole of Cubbon Park is vacant for walking. You are sitting in the House and question hour is paramount.

SRI D B. CHANDRE GOWDA. Thank you very much. ಮಾನ್ಯ ಮಂತ್ರಿಗಳು ಶಾಸಕರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾರೆ ಎಂಬ ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ. ಅದನ್ನು ಶಾಸನ ಸಭೆಯಲ್ಲಿ ಸಾಬೀತು ಮಾಡಬೇಕಾಗುತ್ತದೆ...

ಶ್ರೀ ಕೆ. ಎಸ್ ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಹೇಳಿದ್ದನ್ನು ಆಪಾದನೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ದಯವಾಡಿ ನನ್ನ ಪ್ರಶ್ನೆ ಆದ ಮೇಲೆ ತಾವುಗಳು ಉತ್ತರ ಹೇಳಿ ನನ್ನ ಮನಸ್ಸಿಗೆ ಬಂದ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ೧, ಬೆಂಗಳೂರು ಗ್ರಾಮಾಂತರದಲ್ಲಿ ೩, ಬೆಂಗಳೂರು ನಗರ ಮಂತ್ರಿಗಳಿಗಂಥ ಪ್ರದೇಶದಲ್ಲಿ ಖಾಲಿ ಇರತಕ್ಕಂಥವರ ಸಂಖ್ಯೆ ಕಡಿಮೆ ಇದೆ. ಇದರ ಅರ್ಥ ಏನೆಂದರೆ, ಬೆಂಗಳೂರಿನಲ್ಲಿ ಯಾರಿಗೆ ಪೊಸ್ಟಿಂಗ್ಸ್ ಆಗುತ್ತದೆ. ಅವರು ಡ್ಯೂಟಿಗೆ ಬಂದು ಸೇರಿಕೊಂಡು ಬಿಡುತ್ತಾರೆ, ಗ್ರಾಮಾಂತರ ಪ್ರದೇಶಗಳಿಗೆ ಹಾಕಿದವರು ಅಲ್ಲಿಗೆ ಹೋಗುವುದಿಲ್ಲ ಎಂದು ಸ್ಪಷ್ಟವಾಗುತ್ತದೆ ಹಾಗಿದ್ದಲ್ಲಿ ಅಂಥ ವೈದ್ಯರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರಕಾರದವರು ಏನಾದರೂ ಯೋಚನೆಯನ್ನು ಮಾಡಿದ್ದಾರೆಯೇ ? ಮಾನ್ಯ ದಸ್ಕರಾದ ನಾಯಕ್‌ರವರು ಹೇಳಿದ ಹಾಗೆ, ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಅಕ್ಟೋಬರ್,

ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಬರತಕ್ಕಂಥ ಮಂಗನ ಕಾಯಿಲೆ ಈ ವರ್ಷ ನವೆಂಬರ್ ತಿಂಗಳಲ್ಲಿ ಬಂದು ಬಿಟ್ಟಿದೆ. ಈ ಕುರಿತು ಹಲವಾರು ಭಾರಿ ಹತ್ತಾರು ಬಾರಿ ಹಿಂದಿನ ಸರಕಾರದವರು ಇದ್ದಾಗಲೂ ಹೇಳಿದೆನೆ, ಈಗಲೂ ಹೇಳುತ್ತಾ ಇದ್ದೇನೆ. ಸಾಕಷ್ಟು ಸಾರಿ ಕಾಗದಗಳನ್ನು ಬರೆದಿದ್ದೇನೆ. ಆ ಕ್ಷೇತ್ರಕ್ಕೆ ಮಂತ್ರಿಗಳವರನ್ನು ಕರೆದುಕೊಂಡು ಹೋಗಿದ್ದೇನೆ, ಆದರೂ ಏನೂ ಕೂಡ ಆಗಿಲ್ಲ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ೨೩ ವೈದ್ಯರುಗಳ ಜಾಗ ಖಾಲಿ ಇದೆ. ಆದರಲ್ಲಿ ತೀರ್ಥಪಳ್ಳಿಯಲ್ಲಿಯೇ ೭ ಜಾಗಗಳು ಖಾಲಿ ಇವೆ. ಆದುದರಿಂದ ಇಂಥ ವಿಶೇಷ ಸಂದರ್ಭಗಳಲ್ಲಿ ಮಲೆನಾಡಿಗೆ ಸೀಮಿತವಾದಂಥ ಸಮಸ್ಯೆಗಳು ವಿಶೇಷವಾಗಿ ಇದ್ದಾಗ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ. ಈಗ ಕೆಎಫ್‌ಡಿ ಡಿಸೀಸ್ ಬಗ್ಗೆ ಈಗ ವ್ಯಾಕ್ಸಿನೇಶನ್ ಕಂಡುಹಿಡಿದಿದ್ದೀರಿ, ಅದರ ಪರಿಣಾಮ, ಫಲಿತಾಂಶಗಳು ಇನ್ನೂ ಬರಬೇಕಾಗಿದೆ. ಆದರೆ ಕನಿಷ್ಟ ಆ ಕಾಯಿಲೆ ಬಂದಿರುವವರ ಜೀವ ರಕ್ಷಣೆಯು ಕೆಲಸವನ್ನಾದರೂ ಮಾಡಬೇಕಾಗಿದೆ. ಆ ಬಗ್ಗೆ ತತ್‌ಕ್ಷಣವೇ ಡಾಕ್ಟರ್‌ಗಳನ್ನು ಹಾಕಬೇಕೆಂದು ಪದೇ ಪದೇ ಕೇಳಿದ್ದೇನೆ. ನೀವು ಆ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಅಂತಿಮವಾಗಿ ನಿಮ್ಮ ಮನೆಯ ಬಾಗಿಲಿಗೆ ಬಂದು ಮುಷ್ಕರ ಹೂಡುವ ಹಂತಕ್ಕೆ ತಲುಪಿದ್ದೇವೆ. ಇದನ್ನು ನಾನು ಬಹಳ ಹಗುರವಾಗಿ ಹೇಳುತ್ತಾ ಇಲ್ಲ. ಆದುದರಿಂದ ಈ ಬಗ್ಗೆ ಕೂಡಲೆ ಕ್ರಮಗಳನ್ನು ಆದಷ್ಟು ಜಾಗ್ರತೆ ಕೈಗೊಳ್ಳುತ್ತೀರಾ ? ನಿಮಗೆ ಈ ಬಗ್ಗೆ ಪತ್ರ ಬರೆದು ತಿಳಿಸಿದ್ದೇನೆ, ಇದನ್ನು ವಿಶೇಷ ಸಂದರ್ಭ ಎಂದು ಪರಿಗಣಿಸಿ ಅಲ್ಲಿಗೆ ಫೋಸ್ಟಿಂಗ್ಸ್ ಮಾಡುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಆಗ ಹೇಳಿದ್ದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ರೀತಿಯಲ್ಲಿ ಅರ್ಥೈಸಿದ್ದಾರೆ. ನಾನು ಗಂಟಲು ದೊಡ್ಡದಾಗಿ ಹೇಳಿರಬಹುದು. ನಾನು ಶಾಸಕರುಗಳನ್ನು ಕುರಿತು ಮಾಡಿದ ಆರೋಪಣೆಯಲ್ಲ. ಅದು ಅವರುಗಳ ಬಗ್ಗೆ ರಿಕ್ವೆಸ್ಟ್ ಮಾತ್ರ. ಎಲ್ಲರೂ ಸಹಕಾರವನ್ನು ಈ ಕುರಿತಾಗಿ ಕೊಡಿ ಎಂದು ಕೇಳಿಕೊಂಡಿದ್ದೇನೆ. ಹಾಗೆ ಅವರು ಸಹಕಾರ ಕೊಟ್ಟರೆ ಡಾಕ್ಟರ್‌ಗಳನ್ನು ಪೋಸ್ಟಿಂಗ್ ಮಾಡಲು ಸುಲಭವಾಗುತ್ತದೆಂದು ಹೇಳಿದ್ದೇನೆ ಹೊರತು ಅದು ಆರೋಪಣೆ ಅಲ್ಲ. ಈ ಬಗ್ಗೆ ಮೊನ್ನೆ ತಾವು ಬ್ಯಾಂಕ್ವೆಟ್ ಹಾಲ್‌ನಲ್ಲಿ ನನ್ನನ್ನು ಭೇಟಿಯಾದಾಗ ಹೇಳಿದ್ದೀರಿ ಮಂಗನ ಕಾಯಿಲೆ ವಿಚಾರದಲ್ಲಿ ಕೂಡಲೇ ಅಧಿಕಾರಿಗಳನ್ನು ಕರೆಸಿ ಹೇಳಿದ್ದೇನೆ ವ್ಯಾಕ್ಸಿನೇಷನ್ ಕಳಿಂಹಿಸಿಕೊಟ್ಟೇದ್ದೆವೆಂದು ಅವರು ಹೇಳಿದ್ದಾರೆ. ತಾವು ಹೇಳಿದ ಹಾಗೆ ವ್ಯಾಕ್ಸಿನ್‌ಗಳು ಹೋಗಿ ಬರೀ ಡಬ್ಬದಲ್ಲಿ ಕೊತರೆ ಪ್ರಯೋಜನವಾಗುವುದಿಲ್ಲವೆಂಬುದು ನನಗೂ ಗೊತ್ತಿದೆ. ಕೂಡಲೇ ಡಾಕ್ಟರ್‌ಗಳನ್ನು ಪೋಸ್ಟ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ವೈದ್ಯರು ಬಹಳ ಪ್ರಭಾವಿತ ಜನ, ಮಾನ್ಯ ಸಚಿವರು ಶಾಸಕರು ಇದರಲ್ಲಿ ಕೈಹಾಕಬಾರದೆಂದು ಹೇಳಿದ್ದಾರೆ. ಸಾಮಾನ್ಯವಾಗಿ ಸದಸ್ಯರು ಬಹುಮಟ್ಟಿಗೆ ಕೈಹಾಕೆಂಪ್ರದಿಲ್ಲ. ಆದರೆ ತೊಂದರೆ ಇದ್ದಾಗ ಅದನ್ನು ಸರ್ಕಾರಕ್ಕೆ ಹಾಗೂ ಸಚಿವರಿಗೆ ಹೇಳ ಬೇಕಾಗುತ್ತದೆ, ಆದರೆ ಏನಾಗಿದೆ ಎಂದರೆ ಸರಿಯಾದ ಕ್ರಮದಲ್ಲಿ ನರ್ಗಾಪರ್ಗಿ ಈ ಇಲಾಖೆಯಲ್ಲಿ ನಡೆಯುತ್ತಿಲ್ಲ. ಎಂಎಸ್ ಮಾಡಿದವರು ಎಂಡಿ ಮಾಡಿದವರು, ಪ್ರೊಫೇಸರ್‌ಗಳು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಯಾರ್ಯಾರನ್ನು ಎಲ್ಲೆಲ್ಲಿಗೆ ಹಾಕಬೇಕೆಂಬ ಬಗ್ಗೆ ಸರಿಯಾದ ಕ್ರಮವಿಲ್ಲ. ನಮ್ಮ ಕಡೆಯ ವಲಯದಲ್ಲಿ ಒಬ್ಬ ಹುಡುಗ ಎಂಡಿ ಮಾಡಿದ್ದಾನೆ, ಒಳ್ಳೆಯ ಡಾಕ್ಟರು, ಅವನು ಎಲ್ಲಿದ್ದಾನೆ ಎಂದರೆ, ನನ್ನ ಕ್ಷೇತ್ರದ ಒಂದು ಕುಗ್ರಾಮದಲ್ಲಿ ಇದ್ದಾನೆ. ಅವರನ್ನು ಎಂಡಿ ಹಾಗೂ ಎಂಎಸ್ ಮಾಡಿಸಲು ಸರ್ಕಾರ ಹಣ ಖರ್ಚು ಮಾಡಿದೆ. ಆದರೆ ರಾಜ್ಯಕ್ಕೆ ಏನು ಫಲ ಬಂದಹಾಗಾಯಿತು ? ಇದನ್ನು ಯಾರೂ ನೋಡುವುದಿಲ್ಲ. ಸಚಿವರು ಹೇಳಿದ ರೀತಿ ಅವರ ಆಫೀಸ್ ಅಷ್ಟು ಸುಲಭವಾಗಿಲ್ಲ. ಈಗಿನ ಡೈರೆಕ್ಟರೇಟ್‌ನಲ್ಲಿ ಅಮೂಲಾಗ್ರವಾಗಿ ಬದಲಾವಣೆಯಾಗಬೇಕಾಗಿದೆ. ಜವಾನನಿಂದ ಬದಲಾಗ ಬೇಕಾಗಿದೆ. ಅಲ್ಲಿದೊಡ್ಡ ದೊಡ್ಡ ಹಗ್ಗಣಗಳಿವೆ, ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ, ನಮ್ಮಂತಹ ಬಹಳಜನರನ್ನು ನೋಡಿದ್ದಾರೆ. ಮುಂದಿನ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಇದನ್ನು ಮಾಡುವಾಗ ಸರಿಯಾಗಿ ಮಾಡಬೇಕು. ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಪೆಷಲಿಸ್ಟ್ ಇರಬೇಕೆಂದು ಇದೆ ಆದರೆ ಎಲ್ಲಾ ಆಸ್ಪತ್ರೆಗಳಲ್ಲಿ ಇಲ್ಲ. ತುಮಕೂರಂ ಅವರಿಗೆ ದೂರ, ಚಿತ್ರದುರ್ಗ ಎಷ್ಟು ದೂರ ಇದೆ ? ಆದರೆ ಅಲ್ಲಿಗೆ ಹೋಗುವುದಿಲ್ಲ, ಇದರಲ್ಲಿ ಒಂದು ಕ್ರಮವರಿತು ಮಾಡಿದರೆ ಹಳ್ಳಿಗಾಡುಗಳ ಕಡೆ ವೈದ್ಯರು ಸಿಗುತ್ತಾರೆ. ಮತ್ತೆ ಪ್ರತಿ ವರ್ಷ ಎಷ್ಟು ನೇಮಕವಾಯಿತು ? ಬಹಳ ವರ್ಷಗಳಿಂದ ನೇಮಕವೇ ಆಗಿಲ್ಲ ಒಂದು ಕಡೆ ನೇಮಿಸಲ್ಪಟ್ಟವರು ಹೋಗುವುದಿಲ್ಲ, ಮತ್ತೊಂದು ಕಡೆಗೆ ನೇಮಕಾತಿ ಆಗುವುದಿಲ್ಲ. ರಾಜ್ಯದಲ್ಲಿ ಹಣಕಾಸಿನ ತೊಂದರೆ ವೈದ್ಯ ಇಲಾಖೆಗೆ ಮತ್ತು ವಿದ್ಯಾ ಇಲಾಖೆಗೇ ಬರುತ್ತದೆ ? ಆದ್ದರಿಂದ ಮಂತ್ರಿಗಳು ಇದರ ಬಗ್ಗೆ ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ವ್ಯವಸ್ಥಿತವಾಗಿ ಒಂದು ತೀರ್ಮಾನ ವನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸದಸ್ಯರು ವಿವಿಧ ವಿಚಾರಗಳನ್ನು ಹೇಳಿದ್ದಾರೆ, ಅದನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು ಅದಷ್ಟೂ ಆದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ಹೊಸ ಪಡಿತರ ಚೀಟಿಗಳನ್ನು ಹಂಚುವ ಬಗ್ಗೆ

೧೯೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ ೧೯೯೦ನೇ ತಿಂಗಳಿನಿಂದ ಹೊಸ ಪಡಿತರ ಚೀಟಿಗಳಿಗಾಗಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಕೇಂದ್ರ ಪಲಯ ಕಛೇರಿಯಿಂದ ಎಷ್ಟು ಪಡಿತರ ಚೀಟಿಗಳ ಅರ್ಜಿ ಫಾರಂಗಳನ್ನು ವಿತರಣೆ ಮಾಡಿದೆ ?

ಆ) ಅದರಲ್ಲಿ ಎಷ್ಟು ಅರ್ಜಿ ಫಾರಂಗಳನ್ನು ಹೊಸ ಪಡಿತರ ಚೀಟಿಗಳಿಗಾಗಿ ಸಲ್ಲಿಸಲಾಗಿದೆ ?

ಇ) ಜನವರಿ ೧೯೯೦ ರಿಂದ ಈ ವರೆಗೆ ಎಷ್ಟು ಹೊಸ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಈ) ಬಾಕಿ ಉಳಿದಿರುವ ಅರ್ಜಿ ಫಾರಂಗಳು ಎಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೪,೫೭೮

ಆ) ೪,೪೫೨

ಇ) ೨,೪೪೪

ಈ) ೨,೦೦೪

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಅಧ್ಯಕ್ಷರೇ, ಆಹಾರ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದೆ. ಆದರೆ ನಮ್ಮ ಬೆಂಗಳೂರು ನಗರದಲ್ಲಿ ಎರಡು ಲಕ್ಷ ಜನ ರೇಷನ್ ಕಾರ್ಡ್ ಇಲ್ಲದೆ ಬಹಳ ಪರದಾಡುತ್ತಿದ್ದಾರೆ. ಹಿಂದಿನ ಆಹಾರ ಸಚಿವರು ಭರವಸೆ ಕೊಟ್ಟಿದ್ದರು. ಸಿಂಗಲ್ ವಿಂಡೊ ಏಜೆನ್ಸಿ ಮಾಡುತ್ತೇನೆಂದು ಆದರೆ ಅದು ಇನ್ನೂ ಜಾರಿ ಆಗಿಲ್ಲ. ನಮ್ಮಲ್ಲಿ ೬ ವಲಯಂಗಳದ್ದು ೬ ಜನ ಡಿ. ಡಿ. ಗಳಿದ್ದಾರೆ, ೬ ಜೀಪ್‌ಗಳಿವೆ. ಹಾಗೂ ಸಿಬ್ಬಂದಿಗಳಿದ್ದಾರೆ. ಅವರು ೧೧ ತಿಂಗಳಲ್ಲಿ ತಲಾ ತಿಂಗಳಿಗೆ ೨೦೪ ರಂತೆ ಹೊಸ ಕಾರ್ಡ್ ಕೊಟ್ಟಿದ್ದಾರೆ. ಆದರೆ ಕಾಯುತ್ತಿರುವವರು ಎರಡು ಲಕ್ಷ ಜನ. ಈ ಸಭೆಯಲ್ಲಿ ಹಿಂದೆ ಕೊಟ್ಟ ಭರವಸೆಯಂತೆ ಸಿಂಗಲ್ ವಿಂಡೋ ಏಜೆನ್ಸಿ ಇವತ್ತಿಗೂ ಜಾರಿ ಆಗಲಿಲ್ಲ. ರೇಷನ್ ಕಾರ್ಡ್ ಇವತ್ತು ಬಹಳ ಅವಶ್ಯಕವಾಗಿದೆ, ಅದು ಗುರುತಿನ ಚೀಟಿ ಇದ್ದಂತೆ. ಯಾವುದಾದರೂ ಲೋನ್ ತೆಗೆದುಕೊಳ್ಳಬೇಕಾದರೆ ಅದು ಬೇಕು. ಡ್ರೈವಿಂಗ್ ಲೈಸೆನ್ಸ್ ಮಾಡಿಸಬೇಕಾದರೆ ರೇಷನ್ ಕಾರ್ಡ್ ಬೇಕು. ಸೀಮೆ ಎಣ್ಣೆಗಾಗಿ ಒಂದೊಂದು ಫಲ್ಯಾಂಗ್ ಕ್ಯೂ ಇರುತ್ತದೆ. ಆದರೂ ರೇಷನ್ ಕಾರ್ಡ್ ಕೊಟ್ಟಿಲ್ಲ. ಆದ್ದರಿಂದ ಜಾಗ್ರತೆ ಎಲ್ಲರಿಗೂ ಪಡಿತರ ಚೀಟಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಹಿಂದಿನ ಆಹಾರ ಮಂತ್ರಿಗಳು ಒಂದು ಸರ್ಕ್ಯುಲರನ್ನು ಇಷ್ಯೂ ಮಾಡಿದ್ದರು, ಅದೇನೆಂದರೆ ಎಂ. ಎಲ್. ಎ. ಗಳು ಲೆಟರನ್ನು ಕೊಟ್ಟರೆ ರೇಷನ್ ಫಾರಂನ್ನು ಇಷ್ಯೂ ಮಾಡಬೇಡಿ ಎಂದು. ಅದು ಇನ್ನೂ ಕರೆನ್ಸಿಯಲ್ಲಿದಯೇ ? ಅಥವಾ ಅದನ್ನು ಏನಾದರೂ ವಿತ್‌ಡ್ರಾ ಮಾಡಿಕೊಂಡಿದ್ದೀರೋ ಹೇಗೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಯಾವುದೇ ಒಬ್ಬ ನಾಗರೀಕನಿಗೆ ರೇಷನ್ ಕಾರ್ಡನ್ನು ಕೊಡಬೇಕಾದರೆ ಅದರಲ್ಲಿ ಕೆಲವು ಪರತ್ತ್‌ಗಳು ಮತ್ತು ನಿಯಮಗಳಿರುತ್ತವೆ. ಆ ನಿಯಮಗಳನ್ನು ಅವರು ಪಾಲಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಕೇಳಿದ ಕೊನೆಯ ಪ್ರಶ್ನೆಗೆ ಉತ್ತರವಾಗಿ ೨೦೦೪ ಮಂದಿ ಅರ್ಜಿದಾರರಿಗೆ ಹೊಸ ಕಾರ್ಡ್‌ಗಳನ್ನು ಕೊಟ್ಟಿಲ್ಲ ಎಂದು ಹೇಳಿದ್ದೇನೆ. ನಾಗರೀಕರು ಕೂಡಾ ಕೆಲವು ಮಾಹಿತಿಗಳನ್ನು ಕೊಡಬೇಕಾಗುತ್ತದೆ, ನಿರ್ದಿಷ್ಟವಾದಂಥ ಮಾಹಿತಿಗಳನ್ನು ಅವರು ಕೊಡದೇ ಇದ್ದಾಗ ಎಷ್ಟು ಮಂದಿ ಸಿಬ್ಬಂದಿ ವರ್ಗ ಇದ್ದರೂ ಕೂಡಾ ಅವರು